ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೦**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೈದನೇ ಅಧಿವೇಶನ**

**ಮಂಗಳವಾರ, ದಿನಾಂಕ: ೧೮ನೇ ಮಾರ್ಚ್, ೨೦೨೫**

---

**ಸಮೂಹ – II**

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಮತ್ತು ಹಜ್ ಸಚಿವರು

೬. ಸಹಕಾರ ಸಚಿವರು

೭. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

---

## ಮಂಡ್ಯ ಕೆ.ಹೆಚ್.ಬಿ. (ಮಹಾರಾಜ ನಗರ) ಬಡಾವಣೆಗೆ ಕುಡಿಯುವ ನೀರು ಪೂರೈಸುವ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೧೩೬ (೧೨೨೭) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ನಗರಸಭೆಗೆ ಸೇರಿದ, ಚಿಕ್ಕಮಂಡ್ಯ ಸಮೀಪದ ಕೆ.ಹೆಚ್.ಬಿ. (ಮಹಾರಾಜ ನಗರ) ಬಡಾವಣೆಯ ನಿವಾಸಿಗಳಿಗೆ ನಗರಸಭೆ ವತಿಯಿಂದ ಇದುವರೆವಿಗೂ ಕಾವೇರಿ ಕುಡಿಯುವ ನೀರು ಪೂರೈಸದೆ ಇರುವುದಕ್ಕೆ ಕಾರಣಗಳೇನು ; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಬಡಾವಣೆಯು ಕರ್ನಾಟಕ ಹೌಸಿಂಗ್ ಬೋರ್ಡ್‌ನಿಂದ ಮಂಡ್ಯ ನಗರಸಭೆಗೆ ಯಾವ ವರ್ಷ ಹಸ್ತಾಂತರಿಸಲಾಯಿತು ; ಈ ಬಡಾವಣೆಗೆ ಅಭಿವೃದ್ಧಿಗಾಗಿ ನೀಡಿದ ಹಣ ಎಷ್ಟು ; ನಗರಸಭೆ ಈ ಹಣದಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳಾವುವು ;

(ಇ) ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ ಈ ಬಡಾವಣೆಯಲ್ಲಿ ಈವರೆವಿಗೂ ಆಗಿರುವ ಕೆಲಸಗಳು ಯಾವುವು ; ಇದಕ್ಕೆ ಭರಿಸಲಾಗಿರುವ ವೆಚ್ಚ ಎಷ್ಟು ; (ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು)

(ಈ) ಈ ಬಡಾವಣೆಯಲ್ಲಿ ಇರುವ ಒಟ್ಟು ನಿವೇಶನಗಳ ಪೈಕಿ ಎಷ್ಟು ನಿವೇಶನಗಳಲ್ಲಿ ಮನೆಗಳ ನಿರ್ಮಾಣ ಆಗಿದೆ ; ಇಲ್ಲಿನ ಜನಸಂಖ್ಯೆ ಎಷ್ಟು ;

(ಉ) ಪ್ರಸ್ತುತ ಸದರಿ ಬಡಾವಣೆಯ ಜನರು ಉಪಯೋಗಿಸುತ್ತಿರುವ ನೀರು ಕಲುಷಿತವಾಗಿದ್ದು ಕುಡಿಯಲು ಯೋಗ್ಯವಾಗಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಜನರು ಬಳಸುತ್ತಿರುವ ನೀರಿನ ಗುಣಮಟ್ಟ ಕುರಿತು ಪರೀಕ್ಷಿಸಲಾಗಿದೆಯೇ ;

(ಊ) ಸದರಿ ಬಡಾವಣೆಗೆ ಕುಡಿಯುವ ನೀರು ಪೂರೈಸಲು ತೆಗೆದುಕೊಂಡಿರುವ ಪರ್ಯಾಯ ಕ್ರಮಗಳೇನು ; ಯಾವ ಕಾಲಮಿತಿಯೊಳಗೆ ನೀರು ಒದಗಿಸಲು ಸರ್ಕಾರ ಕ್ರಮವಹಿಸಲಿದೆ ; (ಸಂಪೂರ್ಣ ವಿವರ ನೀಡುವುದು)

(ಋ) ಹೊಸದಾಗಿ ಪೈಪ್‌ಲೈನ್ ಅಳವಡಿಸಿ, ಕಾವೇರಿ ನೀರು ಪೂರೈಸುವ ಸಂಬಂಧ ಯಾವುದಾದರೂ ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆಯೇ ? (ಇದ್ದಲ್ಲಿ, ಈ ಬಗ್ಗೆ ವಿವರ ನೀಡುವುದು)

## ಸರ್ಕಾರಿ ಉದ್ದಿಮೆಗಳನ್ನು ಮುಚ್ಚಲು ನಿರ್ಧರಿಸಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೭ (೧೨೩೨) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರಿ ಸ್ವಾಮ್ಯದಲ್ಲಿ ಒಟ್ಟು ಎಷ್ಟು ಉದ್ದಿಮೆಗಳಿವೆ ; ಈ ಉದ್ದಿಮೆಗಳಲ್ಲಿರುವ ಒಟ್ಟು ಅಧಿಕಾರಿ/ನೌಕರರ ಸಂಖ್ಯೆ ಎಷ್ಟು ; (ಖಾಯಂ ಹಾಗೂ ಗುತ್ತಿಗೆ ನೌಕರರ ವಿವರವನ್ನು ಉದ್ದಿಮೆವಾರು ನೀಡುವುದು)

(ಆ) ಈ ಪೈಕಿ ಲಾಭದಲ್ಲಿರುವ, ನಷ್ಟದಲ್ಲಿರುವ ಮತ್ತು ನಿಷ್ಕ್ರಿಯೆಗೊಂಡಿರುವ ಉದ್ದಿಮೆಗಳು ಯಾವುವು ; ಇವುಗಳ ಮೌಲ್ಯಮಾಪನ ಆಗಿದೆಯೇ ; ಉದ್ದಿಮೆವಾರು ಲಾಭ–ನಷ್ಟದ ವಿವರ ಮತ್ತು ಮೌಲ್ಯಮಾಪನ ವರದಿ ಒದಗಿಸುವುದು ;

(ಇ) ಕಳೆದ ೩ ವರ್ಷದಿಂದ ನಿಷ್ಕ್ರಿಯಗೊಂಡಿರುವ ಮತ್ತು ನಷ್ಟದಲ್ಲಿರುವ ಉದ್ದಿಮೆಗಳನ್ನು ಲಾಭದ ಹಳಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಈ ಉದ್ದಿಮೆಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗಿದೆಯೇ ;

(ಈ) ನಿಷ್ಕ್ರಿಯಗೊಂಡಿರುವ ಉದ್ದಿಮೆಗಳ ಆರ್ಥಿಕ ಸ್ಥಿತಿಗತಿಗಳೇನು ; (ವಿವರ ನೀಡುವುದು) ನಿಷ್ಕ್ರಿಯ ಮತ್ತು ನಷ್ಟದಲ್ಲಿರುವ ಉದ್ದಿಮೆಗಳನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆಯೇ ; ಇದರ ಸಾಧಕ–ಬಾಧಕಗಳ ಅಧ್ಯಯನ ಆಗಿದೆಯೇ ; ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ; (ವಿವರ ನೀಡುವುದು)

(ಉ) ನಿಷ್ಕ್ರಿಯಗೊಂಡಿರುವ ಉದ್ದಿಮೆಗಳನ್ನು ಮುಚ್ಚುವ ಬದಲು ಲಾಭದಲ್ಲಿರುವ ಉದ್ದಿಮೆಗಳ ಜೊತೆ ವಿಲೀನಗೊಳಿಸುವ ಕುರಿತು ಸರ್ಕಾರದ ನಿಲುವೇನು ?

# ವಿ.ಎಸ್.ಎಸ್.ಎನ್‌ಗಳಲ್ಲಿ ನಡೆಯುತ್ತಿರುವ ಚುನಾವಣಾ ವಂಚನೆಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೮ (೧೧೬೬) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ವಿ.ಎಸ್.ಎಸ್.ಎನ್) ಸರ್ವಸದಸ್ಯರ ವಾರ್ಷಿಕ ಮಹಾಸಭೆಗಳಲ್ಲಿ ಕೆಲವು ಮುಗ್ಧ ರೈತರು/ ಷೇರುದಾರರು/ಸದಸ್ಯರು ಹಾಜರಿದ್ದರೂ ಸಹ ಸಭೆಯ ಹಾಜರಾತಿ ಪುಸ್ತಕದಲ್ಲಿ ಅವರ ಸಹಿ ಪಡೆಯದಿರುವುದು ಅಥವಾ ಬೇರೊಂದು ಪುಸ್ತಕದಲ್ಲಿ ಉದ್ದೇಶ ಪೂರ್ವಕವಾಗಿ ಸಹಿ ಪಡೆದು ಅವರನ್ನು ಸರ್ವಸದಸ್ಯರ ವಾರ್ಷಿಕ ಮಹಾಸಭೆಗಳಲ್ಲಿ ಹಾಜರಾಗಿಲ್ಲವೆಂಬ ಕಾರಣ ನೀಡಿ ಆಡಳಿತ ಮಂಡಳಿಯ ಚುನಾವಣೆಯ ಅರ್ಹ ಮತದಾರರ ಪಟ್ಟಿಯಿಂದ ಕೈಬಿಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ನೀಡುವುದು)

(ಆ) ಸಂಘಗಳಲ್ಲಿ ಇಂತಹ ಚುನಾವಣಾ ವಂಚನೆಗಳನ್ನು ತಡೆಯಲು ಸಹಕಾರ ಸಂಘಗಳ ರಿಜಿಸ್ಟ್ರಾರ್ ಇವರಿಂದ ರಾಜ್ಯವ್ಯಾಪ್ತಿಯಾಗಿ ಏಕರೂಪದ, ಸರ್ಕಾರದಿಂದ ಮುದ್ರಿಸಿದ ನಿಗದಿತ ಕ್ರಮ ಸಂಖ್ಯೆಗಳುಳ್ಳ ಹಾಜರಾತಿ ಪುಸ್ತಕಗಳನ್ನು ಎಲ್ಲಾ ಸಹಕಾರ ಸಂಘಗಳಿಗೆ ವಿತರಿಸುವ ಸಂಬಂಧ ಸರ್ಕಾರದ ನಿಲುವೇನು ; (ಮಾಹಿತಿ ನೀಡುವುದು)

(ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅನುಸರಿಸುತ್ತಿರುವ ಪಂಚತಂತ್ರ ೨.೦ ಮಾದರಿಯಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ವಿ.ಎಸ್.ಎಸ್.ಎನ್) ಸರ್ವಸದಸ್ಯರ ವಾರ್ಷಿಕ ಮಹಾಸಭೆಗಳ ಸಭಾ ಸೂಚನೆ/ಸಭಾ ಆಹ್ವಾನ ಪತ್ರ/ಸಭಾ ಹಾಜರಾತಿ

ಮತ್ತು ಸಭೆಯ ನಡವಳಿಯನ್ನು ಸಾರ್ವಜನಿಕರಿಗೆ/ಸದಸ್ಯರಿಗೆ ಮುಕ್ತವಾಗಿ ಮಾಹಿತಿ ನೀಡಲು ಮತ್ತು ಅಂತಹ ಎಲ್ಲಾ ಸಭೆಗಳನ್ನು ವಿಡಿಯೋ ಚಿತ್ರೀಕರಣ ಮಾಡಿ ಅಪ್‌ಲೋಡ್ ಮಾಡುವ ಬಗ್ಗೆ ಮತ್ತು ಮುಂದಿನ ಚುನಾವಣೆ ಮುಗಿಯುವವರೆಗೂ ಸಂರಕ್ಷಿಸಿಡುವ ಬಗ್ಗೆ ಸರ್ಕಾರದ ನಿಲುವೇನು ? (ಮಾಹಿತಿ ನೀಡುವುದು)

## ಕೆ.ಎಸ್.ಎಂ.ಸಿ.ಎ ಯಿಂದ ಕಾರ್ಯಕ್ರಮ ಆಯೋಜಿಸಿರುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೧೩೯ (೧೧೬೮) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆ.ಎಸ್.ಎಂ.ಸಿ.ಎ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳ ಅಥವಾ ಇತರೆ ಯಾವುದೇ ಸರ್ಕಾರದ ಅಂಗ ಸಂಸ್ಥೆಗಳ ಎಷ್ಟು ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದೆ ; ಈ ಕಾರ್ಯಕ್ರಮಗಳಿಗೆ ಭರಿಸಲಾದ ಮೊತ್ತವೆಷ್ಟು ; (ಕಾರ್ಯಕ್ರಮವಾರು ಮಾಹಿತಿ ನೀಡುವುದು)

(ಆ) ಈ ಕಾರ್ಯಕ್ರಮಗಳನ್ನು ಕೆ.ಎಸ್.ಎಂ.ಸಿ.ಎ ಸ್ವತಃ ಕೈಗೊಂಡಿದೆಯೆ ಅಥವಾ ಯಾವುದಾದರೂ ಬೇರೆ ಸಂಸ್ಥೆಗಳಿಗೆ/ಗುತ್ತಿಗೆದಾರರಿಗೆ ತುಂಡು ಗುತ್ತಿಗೆ ಅಥವಾ ಟೆಂಡರ್ ಮೂಲಕ ನೀಡಿ ಅನುಷ್ಠಾನಗೊಳಿಸಿದೆಯೇ ; ಬೇರೆ ಸಂಸ್ಥೆಗಳಿಗೆ/ಗುತ್ತಿಗೆದಾರರಿಗೆ ನೀಡಲಾಗಿದೆಯೇ ; ನೀಡಿದ್ದಲ್ಲಿ, (ಅವರ ವಿವರಗಳೊಂದಿಗೆ ಕಾರ್ಯಕ್ರಮವಾರು ಮಾಹಿತಿ ನೀಡುವುದು)

(ಇ) ಕೆ.ಎಸ್.ಎಂ.ಸಿ.ಎ ವತಿಯಿಂದ ಕಾರ್ಯಕ್ರಮಗಳನ್ನು ಪಡೆಯುವ ಸಂಸ್ಥೆಗಳು/ ಗುತ್ತಿಗೆದಾರರು ಕೆ.ಎಸ್.ಎಂ.ಸಿ.ಎ ನಲ್ಲಿ ನೋಂದಣಿ ಮಾಡಿಕೊಳ್ಳಬೇಕಿದೆಯೇ ; ಹಾಗಿದ್ದಲ್ಲಿ, ಕೆ.ಎಸ್.ಎಂ.ಸಿ.ಎ ನಲ್ಲಿ ಇಲ್ಲಿಯವರೆವಿಗೂ ನೋಂದಣಿಯಾಗಿರುವ ಸಂಸ್ಥೆಗಳಿಗೆ/ಗುತ್ತಿಗೆದಾರರು ಯಾರ್ಯಾರು ; (ವಿವರಗಳನ್ನು ನೀಡುವುದು)

(ಈ) ಕೆ.ಎಸ್.ಎಂ.ಸಿ.ಎ ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳ ಅಥವಾ ಇತರೆ ಯಾವುದೇ ಸರ್ಕಾರದ ಅಂಗ ಸಂಸ್ಥೆಗಳಿಂದ ಕಾರ್ಯಕ್ರಮಗಳನ್ನು ರೂಪಿಸುವುದು, ಆಯೋಜನೆ, ಅನುಷ್ಟಾನ ಜವಾಬ್ದಾರಿಗಳನ್ನು ಪಡೆದಾಗ ಅವುಗಳ ಯೋಜನೆ, ರೂಪಿಸುವುದು ಮತ್ತು ಅನುಷ್ಟಾನದಲ್ಲಿ ಅನುಸರಿಸುತ್ತಿರುವ ಪ್ರಮಾಣಿತ ಕಾರ್ಯಚರಣಾ ವಿಧಾನಗಳೇನು ? (ಕೆ.ಎಸ್.ಎಂ.ಸಿ.ಎ ಅಳವಡಿಸಿಕೊಂಡಿರುವ MOA, AOAನ ಮಾಹಿತಿಯನ್ನು ಒದಗಿಸುವುದು)

## ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ೫ ಲಕ್ಷ ಬೆಳೆ ಸಾಲದ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೦ (೧೨೧೪) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಆಯ–ವ್ಯಯ ಮಂಡನೆ ಸಂದರ್ಭದಲ್ಲಿ ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಬೆಳೆ ಸಾಲದ ಮಿತಿಯನ್ನು ೩ ಲಕ್ಷದಿಂದ ೫ ಲಕ್ಷಕ್ಕೆ ಏರಿಸಲಾಗಿದೆ, ಹೆಚ್ಚುವರಿ ಮಾಡಿರುವ ಸದರಿ ೫ ಲಕ್ಷ ಸಾಲದ ಮೊತ್ತವನ್ನು ಇದುವರೆಗೆ ಎಷ್ಟು ವಿತರಣೆ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಸಂಬಂಧಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹೆಚ್ಚುವರಿ ಮಾಡಿರುವ ೫ ಲಕ್ಷ ಸಾಲದ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ವಿತರಣೆ ಮಾಡುತ್ತಿಲ್ಲದಿರುವುದು ಕಂಡು ಬಂದಿದ್ದು ಅದಕ್ಕೆ ಕಾರಣಗಳೇನು ಹಾಗೂ ಈ ಬಗ್ಗೆ ಸರ್ಕಾರ ಇದುವರೆಗೆ ಕೈಗೊಂಡ ಕ್ರಮವೇನು ;

(ಇ) ಯಾವ ಕಾಲಮಿತಿಯೊಳಗೆ, ಸದರಿ ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಬೆಳೆ ಸಾಲದ ಏರಿಕೆ ಮಾಡಿರುವ ಹೆಚ್ಚುವರಿ ಹಣವು ಸೇರಿದಂತೆ ಪೂರ್ಣ ಪ್ರಮಾಣದಲ್ಲಿ ಅರ್ಹ ಫಲಾನುಭವಿಗಳಿಗೆ ಸಿಗುವಂತೆ ಸೂಕ್ತ ಕ್ರಮ ವಹಿಸಲಾಗುವುದೆ ?

## ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೧೪೧ (೧೧೮೫) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೨ ವರ್ಷಗಳಲ್ಲಿ ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿಗೆ ಎಷ್ಟು ಸದಸ್ಯರುಗಳನ್ನು ನೇಮಕ ಮಾಡಲಾಗಿದೆ ; ನೇಮಕಾತಿಗೆ ಇರುವ ಮಾನದಂಡಗಳಾವುವು ; (ಪ್ರತಿಯನ್ನು ಒದಗಿಸುವುದು)

(ಆ) ಪ್ರಸ್ತುತ ನಾಮನಿರ್ದೇಶನ ಸ್ಥಾನಗಳ ಸಂಖ್ಯೆ ಎಷ್ಟು ; ಅವುಗಳನ್ನು ಭರ್ತಿ ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ; (ಸಂಪೂರ್ಣ ಮಾಹಿತಿಯನ್ನು ಆದೇಶದ ಪ್ರತಿಯೊಂದಿಗೆ ಒದಗಿಸುವುದು)

(ಇ) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ ೨೦೦೯ (ತಿದ್ದುಪಡಿ ೨೦೨೧)ರ ಪ್ರಕರಣ ೧೨(೨)ರನ್ವಯ ವಿಧಾನ ಪರಿಷತ್ತಿನ ಸದಸ್ಯರನ್ನು ನೇಮಕ ಮಾಡಲು ಪ್ರಸ್ತಾವನೆ ಬಂದಿದೆಯೇ ; (ದಿನಾಂಕ ತಿಳಿಸುವುದು)

(ಈ) ಇಲ್ಲಿಯವರೆಗೂ ನಾಮನಿರ್ದೇಶನ ಮಾಡದಿರಲು ಕಾರಣಗಳೇನು ; ಯಾವ ಕಾಲಮಿತಿಯೊಳಗೆ ಮಾಡಲಾಗುವುದು ?

## ತೋಟಗಾರಿಕೆ ಇಲಾಖೆಯಿಂದ ರೈತರಿಗೆ ನೀಡುತ್ತಿರುವ ಔಷಧಿಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೨ (೧೧೮೪) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತೋಟಗಾರಿಕೆ ಇಲಾಖೆಯಲ್ಲಿ ರೈತರಿಗೆ ಯಾವ ಯಾವ ಯೋಜನೆಯಡಿ ಯಾವ ಕಾಮಗಾರಿಗಳಿಗೆ ಅನುದಾನವನ್ನು ನೀಡಲಾಗುತ್ತಿದೆ ; (ಯೋಜನೆವಾರು ವಿವರ ಒದಗಿಸುವುದು)

(ಆ) ತೋಟಗಾರಿಕೆ ಇಲಾಖೆಯಿಂದ ರೈತರಿಗೆ ಪ್ರತಿ ವರ್ಷ ಎಷ್ಟು ಪ್ರಮಾಣದ ಯಾವ ಯಾವ ಬೆಳೆಯ ತೋಟಕ್ಕೆ ಎಷ್ಟು ಪ್ರಮಾಣದ ಔಷಧಿಗಳನ್ನು ನೀಡಲಾಗುತ್ತಿದೆ ; (ವಿವರ ಒದಗಿಸುವುದು)

(ಇ) ತೋಟಗಾರಿಕೆ ಬೆಳೆಗೆ ಬೆಂಬಲ ಬೆಲೆ ನಿಗದಿಯಾಗಿದ್ದರೆ ಪ್ರತಿ ಬೆಳೆಗಳ ಬೆಲೆಗಳನ್ನು ತಿಳಿಸುವುದು ? (ವಿವರ ಒದಗಿಸುವುದು)

## ರಾಜ್ಯದಲ್ಲಿರುವ ಮಹಾನಗರ ಪಾಲಿಕೆಗಳ ಮಾಹಿತಿ ಕುರಿತು

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) –**

೧೪೩ (೧೨೪೦) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಮಹಾನಗರ ಪಾಲಿಕೆಗಳ ಸಂಖ್ಯೆ ಎಷ್ಟು ಮತ್ತು ಯಾವುವು ;

(ಆ) ೨೦೨೪–೨೫ನೇ ಸಾಲಿನಲ್ಲಿ ಈ ಮಹಾನಗರ ಪಾಲಿಕೆಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಕಲ್ಪಿಸಿರುವ ಮೂಲ ಸೌಲಭ್ಯಗಳು ಯಾವುವು ; (ಮಾಹಿತಿ ನೀಡುವುದು)

(ಇ) ನಗರ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಎಷ್ಟು ;

(ಈ) ೨೦೨೪–೨೫ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು ; ಈ ಹಣವನ್ನು ಯಾವ ಯಾವ ಜಿಲ್ಲೆಗಳ ಮಹಾನಗರ ಪಾಲಿಕೆಗಳಿಗೆ ಹಂಚಿಕೆ ಮಾಡಲಾಗಿದೆ ;

(ಉ) ೨೦೨೪–೨೫ನೇ ಸಾಲಿನಲ್ಲಿ ದಾವಣಗೆರೆ ಮಹಾನಗರ ಪಾಲಿಕೆಗೆ ಮೂಲಭೂತ ಸೌಕರ್ಯಗಳಿಗಾಗಿ ಒದಗಿಸಿರುವ ಅನುದಾನ ಎಷ್ಟು ; ಖರ್ಚಾಗಿರುವ ಅನುದಾನ ಎಷ್ಟು ?

## ಆತ್ಮಹತ್ಯೆ ಮಾಡಿಕೊಂಡ ನೇಕಾರ ಕುಟುಂಬದವರಿಗೆ ಪರಿಹಾರ ನೀಡುವ ಬಗ್ಗೆ

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೧೪೪ (೧೧೯೭) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನೇಕಾರರ ಆತ್ಮಹತ್ಯೆಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ೦೫ ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಜನ ನೇಕಾರರು ಆತ್ಮಹತ್ಯೆಗೆ ಶರಣಾಗಿದ್ದಾರೆ ;

(ಇ) ಆತ್ಮಹತ್ಯೆ ಮಾಡಿಕೊಂಡ ನೇಕಾರ ಕುಟುಂಬದವರಿಗೆ ಪರಿಹಾರ ನೀಡಲಾಗುತ್ತಿದೆಯೇ ; ನೀಡಿದ್ದಲ್ಲಿ, ಎಷ್ಟು ಮೃತ ಕುಟುಂಬಕ್ಕೆ ಪರಿಹಾರ ನೀಡಲಾಗಿದೆ ; ನೀಡಲಾಗುತ್ತಿರುವ ಮೊತ್ತವೆಷ್ಟು ;

(ಈ) ಆತ್ಮಹತ್ಯೆ ಮಾಡಿಕೊಂಡ ನೇಕಾರ ಪತ್ನಿಗೆ ಪಿಂಚಣಿ ನೀಡಲಾಗುತ್ತಿದೆಯೇ ; ಅವರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡಲಾಗುತ್ತಿದೆಯೇ ?

## ಉರಗೂಡು ಗ್ರಾಮದ ವಸತಿ ಬಡಾವಣೆ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೫ (೧೧೫೬) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಬಡಾವಣೆ ರಚಿಸಲು ಉರಗೂಡು ಗ್ರಾಮದಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ ; (ಸರ್ವೆ ನಂ.ಗಳ ಸಮೇತ ಸಂಪೂರ್ಣ ವಿವರ ನೀಡುವುದು)

(ಆ) ಉರಗೂಡು ಗ್ರಾಮದ ಸರ್ವೆ ನಂ.೩೪೦ ರಿಂದ ೩೫೭ರ ವರೆಗಿನ ಜಮೀನಿನ ಭೂಮಾಲೀಕರುಗಳಿಗೆ ನಿಗಧಿಪಡಿಸುವ ಪರಿಹಾರದ ಮೊತ್ತವೆಷ್ಟು ಹಾಗೂ ಸದರಿ ಪರಿಹಾರವನ್ನು ಯಾವ ವರ್ಷದ ದರಕ್ಕೆ ಅನುಗುಣವಾಗಿ ನಿಗದಿಪಡಿಸಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಸದರಿ ಭೂಮಾಲೀಕರುಗಳಿಗೆ ಪರಿಹಾರದ ರೂಪದಲ್ಲಿ ನೀಡಿರುವ ನಿವೇಶನಗಳೆಷ್ಟು ; (ಸಂಪೂರ್ಣ ವಿವರ ನೀಡುವುದು)

(ಈ) ಸದರಿ ವಸತಿ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆ ದಿನಾಂಕವೇನು ; ಬಡಾವಣೆಯ ಕಾಮಗಾರಿ ಯಾವ ದಿನಾಂಕದಿಂದ ಪ್ರಾರಂಭಿಸಲಾಗಿದೆ ;

(ಉ) ಕಾಮಗಾರಿ ಪ್ರಾರಂಭಿಸಿದ ದಿನಾಂಕದ ದರದಲ್ಲಿ ಭೂಪರಿಹಾರ ದರ ನಿಗದಿಪಡಿಸದೆ ಹಳೆಯ ದರದಲ್ಲಿ ಭೂಪರಿಹಾರ ವಿತರಿಸಿರುವುದರಿಂದ ಭೂಮಾಲೀಕರುಗಳಿಗೆ ವಂಚಿಸಿದಂತಾಗುವುದಿಲ್ಲವೆ ; ಸರ್ಕಾರವು ಸದರಿ ಭೂಮಾಲೀಕರುಗಳಿಗೆ ನ್ಯಾಯ ಒದಗಿಸಿಕೊಡಲು ಕ್ರಮ ಕೈಗೊಳ್ಳುವುದೆ ? (ವಿವರ ನೀಡುವುದು)

## ನಗರಸಭೆ ಮತ್ತು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೬ (೧೧೫೨) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಹುಮನಾಬಾದ್ ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಹಾಗೂ ರಾಜೇಶ್ವರ ಗ್ರಾಮ ಪಂಚಾಯತ್‌ನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ ; (ಬಂದಿದ್ದಲ್ಲಿ, ಸರ್ಕಾರದ ಮುಂದಿದೆಯೆ)

(ಆ) ಇದ್ದಲ್ಲಿ, ಸರ್ಕಾರ ಇಲ್ಲಿಯವರೆಗೆ ಮೇಲ್ದರ್ಜೆಗೇರಿಸದಿರಲು ಕಾರಣವೇನು ; (ಮಾಹಿತಿ ನೀಡುವುದು)

(ಇ) ಸರ್ಕಾರವು ಇವುಗಳನ್ನು ಯಾವಾಗ ನಗರಸಭೆಯಾಗಿ ಮತ್ತು ಪುರಸಭೆಯಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳುವುದು ? (ಮಾಹಿತಿ ನೀಡುವುದು)

## ಮಡಿಕೇರಿಯಲ್ಲಿ ರಾಜಾಸೀಟ್ ಬಳಿ ಇರುವ ಟಾಯ್ ಟ್ರೈನ್ ಅನ್ನು ಪುನರಾರಂಭಿಸುವ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೭ (೧೨೬೨) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯ ಮಡಿಕೇರಿಯ ರಾಜಾಸೀಟ್ ಬಳಿ ೧೫ ವರ್ಷಗಳ ಕಾಲ ಚಾಲ್ತಿಯಲ್ಲಿರುವ ಟಾಯ್ ಟ್ರೈನ್ ಅನ್ನು ೨೦೧೮–೧೯ನೇ ಸಾಲಿನಲ್ಲಿ ಸ್ಥಗಿತಗೊಳಿಸಲು ಕಾರಣವೇನು ;

(ಆ) ಸದರಿ ಟಾಯ್ ಟ್ರೈನ್ ದುರಸ್ತಿ ಕಾರ್ಯವನ್ನು ಕೈಗೊಳ್ಳಲು ಬೇಕಾಗುವ ಅನುದಾನ ಎಷ್ಟು ;

(ಇ) ಇದನ್ನು ಪುನರಾರಂಭಿಸಲು ಇಲಾಖಾ ಪರಿಣಿತರು ಪರಿಶೀಲಿಸುವ ತಾಂತ್ರಿಕ ಕಾರ್ಯವು ಕೈಗೊಳ್ಳಲಾಗಿದೆಯೇ ; ಯಾವ ಹಂತದಲ್ಲಿದೆ ; ಮತ್ತು ಯಾವ ಕಾಲಮಿತಿಯೊಳಗೆ ಇದನ್ನು ಪುನರಾರಂಭಿಸಲಾಗುವುದು ?

## BGML ಮತ್ತು BEML ವ್ಯಾಪ್ತಿಗೆ ಒಳಪಡುವ ಜಮೀನಿನ ವಿಸ್ತೀರ್ಣದ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೮ (೧೧೭೭) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಯ ಬಂಗಾರಪೇಟೆ ಮತ್ತು ಕೆ.ಜಿ.ಎಫ್ ತಾಲ್ಲೂಕುಗಳಲ್ಲಿ ಬಿ.ಜಿ.ಎಂ.ಎಲ್ ಮತ್ತು ಬಿ.ಇ.ಎಂ.ಎಲ್ ವ್ಯಾಪ್ತಿಗೆ ಒಳಪಡುವ ಜಮೀನಿನ ವಿಸ್ತೀರ್ಣವೆಷ್ಟು ; (ಸರ್ವೆ ನಂಬರ್‌ವಾರು, ಗ್ರಾಮವಾರು ಮತ್ತು ವಿಸ್ತೀರ್ಣವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಬಿ.ಜಿ.ಎಂ.ಎಲ್ ಮತ್ತು ಬಿ.ಇ.ಎಂ.ಎಲ್ ಜಮೀನು ಪೈಕಿ ಎಷ್ಟು ವಿಸ್ತೀರ್ಣ ಜಮೀನನ್ನು ಸರ್ಕಾರಕ್ಕೆ ಮರು ನಿಹಿತಗೊಳಿಸಲಾಗಿದೆ ; ಸರ್ಕಾರಕ್ಕೆ ಮರು ನಿಹಿತಗೊಳಿಸಿಕೊಂಡ ಜಮೀನನ್ನು ಯಾವ ಯಾವ ಉದ್ದೇಶಗಳಿಗೆ ಉಪಯೋಗಿಸಲಾಗಿದೆ ; ಉಳಿಕೆ ಎಷ್ಟಿದೆ ; (ಸರ್ವೆ ನಂಬರ್‌ವಾರು, ಗ್ರಾಮವಾರು ಮತ್ತು ವಿಸ್ತೀರ್ಣವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಈ ಪೈಕಿ ಕೆ.ಐ.ಎ.ಡಿ.ಬಿ. ಪ್ರದೇಶಕ್ಕೆ ಎಷ್ಟು ವಿಸ್ತೀರ್ಣವನ್ನು ನೀಡಲಾಗಿರುತ್ತದೆ ; ಕೆ.ಐ.ಎ.ಡಿ.ಬಿ ಪ್ರದೇಶಕ್ಕೆ ನೀಡಲಾಗಿರುವ ಜಮೀನನ್ನು ಯಾವ ಯಾವ ಕೈಗಾರಿಕೆ/ಕಂಪನಿಗಳಿಗೆ ನೀಡಲಾಗಿದೆ ; ಪ್ರತಿ ಎಕರೆಗೆ ನಿಗದಿಗೊಳಿಸಲಾಗಿರುವ ಮೊತ್ತವೆಷ್ಟು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ಕೋಲಾರ ಜಿಲ್ಲಾ ವ್ಯಾಪ್ತಿಯಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಎಷ್ಟು ಕೈಗಾರಿಕಾ ಪ್ರದೇಶಗಳೆಂದು ಘೋಷಿಸಲಾಗಿದೆ ; ಕೆ.ಐ.ಎ.ಡಿ.ಬಿ ಪ್ರದೇಶವೆಂದು ಘೋಷಿಸಲಾಗಿರುವ ಜಮೀನುಗಳ ಪೈಕಿ ಯಾವ ಯಾವ ಕೈಗಾರಿಕೆ/ ಕಂಪನಿಗಳಿಗೆ ನೀಡಲಾಗಿದೆ ; ಪ್ರತಿ ಎಕರೆಗೆ ಎಷ್ಟು ಮೊತ್ತವನ್ನು ನೀಡಲು ನಿಗದಿಪಡಿಸಲಾಗಿದೆ ; (ತಾಲ್ಲೂಕುವಾರು ವಿಸ್ತೀರ್ಣವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಉ) ಕೆ.ಐ.ಎ.ಡಿ.ಬಿ. ಪ್ರದೇಶವೆಂದು ಘೋಷಿಸಲಾಗಿರುವ ಜಮೀನಿನ ಪೈಕಿ ವಿವಿಧ ಉದ್ದೇಶಗಳಿಗೆ ನೀಡದೆ ಉಳಿಕೆ ಇರುವ ಜಮೀನಿನ ವಿಸ್ತೀರ್ಣವೆಷ್ಟು ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಸಮಗ್ರ ತೋಟಗಾರಿಕಾ ಯೋಜನೆಯ ಕುರಿತು

**ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೯ (೧೨೪೫) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಮಗ್ರ ತೋಟಗಾರಿಕಾ ಯೋಜನೆ (Comprehensive Horticulture Scheme) ಅಡಿಯಲ್ಲಿ ಪ್ರಸ್ತುತ ರೈತರಿಗೆ ನೀಡಲಾಗುತ್ತಿರುವ ಅನುದಾನ (ಸಹಾಯ ಧನ) ಮತ್ತು ಸೌಲಭ್ಯಗಳು ಯಾವುವು ; ಈ ಯೋಜನೆಯಡಿ ಕನಿಷ್ಟ ಮತ್ತು ಗರಿಷ್ಟ ಅನುದಾನದ ಪ್ರಮಾಣವೆಷ್ಟು ; ಮತ್ತು ಅದು ಯಾವ ಕ್ರಾಪ್ (ಬೆಳೆ)ಗಳಿಗೆ ಅನ್ವಯಿಸುತ್ತದೆ ; (ಬೆಳೆವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಯೋಜನೆಯ ಅನುದಾನವನ್ನು ಕಡಿತಗೊಳಿಸಲಾಗಿದೆ ಎಂಬ ವದಂತಿಗೆ ಸರ್ಕಾರದ ಸ್ಪಷ್ಟನೆ ಏನು ; ಹಾಲಿ ಯೋಜನೆಗಳ ಅನುಷ್ಟಾನದಲ್ಲಿ ಎದುರಾಗುತ್ತಿರುವ ಪ್ರಮುಖ ಅಡಚಣೆಗಳು ಯಾವುವು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಅನುದಾನ ಬಿಡುಗಡೆ ಮಾಡಿದ್ದರೂ, ರೈತರಿಗೆ ನೀಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ; ಫಲಾನುಭವಿಗಳು ಯೋಜನೆಯ ಬಗ್ಗೆ ಸರಿಯಾಗಿ ಮಾಹಿತಿ ಪಡೆಯಲು ಜಿಲ್ಲಾ ಮಟ್ಟದಲ್ಲಿ ಸರ್ಕಾರ ಏನು ಪ್ರಣಾಳಿಕೆ ರೂಪಿಸಿದೆ ; (ಮಾಹಿತಿ ನೀಡುವುದು)

(ಈ) ಈ ಯೋಜನೆಯ ಅಡಿಯಲ್ಲಿ ರಾಜ್ಯದ ಎಷ್ಟು ರೈತರು ಸೌಲಭ್ಯ ಪಡೆದಿದ್ದಾರೆ ; ಅರ್ಜಿದಾರರ ಆಯ್ಕೆ ಪ್ರಕ್ರಿಯೆಯಲ್ಲಿ ರಾಜಕೀಯ ಅಥವಾ ದುರಾಕ್ರಮಣದ ಆರೋಪವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಏನು ಕ್ರಮ ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಎ.ಪಿ.ಎಂ.ಸಿ. ನಿಯಂತ್ರಿತ ಮಂಡಿಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೦ (೧೨೫೧) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಎ.ಪಿ.ಎಂ.ಸಿ. ನಿಯಂತ್ರಿತ ಮಂಡಿಗಳ ಸಂಖ್ಯೆ ಎಷ್ಟು ; (ಜಿಲ್ಲಾ ಮಾಹಿತಿ ನೀಡುವುದು)

(ಆ) ಮಾರಾಟ ಸಂಕಷ್ಟವನ್ನು ತಡೆಗಟ್ಟಲು ಮತ್ತು ರೈತರಿಗೆ ಆದಾಯ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಹೆಚ್ಚಿನ ಸಂಖ್ಯೆಯ ಮಾರುಕಟ್ಟೆಗಳನ್ನು ಸ್ಥಾಪಿಸುವ ಅವಶ್ಯಕತೆ ಇರುವ ಕುರಿತು ಸರ್ಕಾರದ ನಿಲುವೇನು ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ರಾಜ್ಯ ರಾಜಧಾನಿಯಲ್ಲಿರುವ ಯಶವಂತಪುರ ಎ.ಪಿ.ಎಂ.ಸಿ.ಯಲ್ಲಿ ವಾಹನ ದಟ್ಟಣೆ ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ; ಹಾಗಿದ್ದಲ್ಲಿ, ಈ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ ; ಮತ್ತು ೨೦೨೫–೨೦೨೬ನೇ ಆಯವ್ಯಯದಲ್ಲಿ ಈ ಎ.ಪಿ.ಎಂ.ಸಿ. ಆವರಣವನ್ನು ವಿಸ್ತರಿಸಲು ಅನುದಾನವನ್ನು ಮೀಸಲಿಡಲು ಕೈಗೊಂಡಿರುವ ಕ್ರಮವೇನು ;

(ಈ) ಈ ಮಂಡಿಗಳನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡಿರುವ/ ತೆಗೆದುಕೊಳ್ಳುತ್ತಿರುವ ಕ್ರಮಗಳು ಯಾವುವು ?

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ.911/ಪಿ5

**List of Questions**
**for Oral Answers**

**Total No. of**
**Questions - 15**

# LIST - 10

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Tuesday, the 18th March, 2025

---

## GROUP - II

1. Minister for Large and Medium Scale Industries and Infrastructure Development
2. Minister for Textiles, Sugarcane Development and Sugar and Agricultural Marketing
3. Minister for Small Scale Industries and Public Enterprises
4. Minister for Mines and Geology and Horticulture
5. Minister for Municipalities and Haj
6. Minister for Co-operation
7. Minister for Urban Development and Town Planning

---

### SUPPLYING DRINKING WATER TO K.H.B LAYOUT (MAHARAJA NAGAR) OF MANDYA

**Sri Madhu G. Madegowda (Graduates' Constituency)**

136 (1227 ) Will the Minister for Municipalities and Haj be pleased to state :-

(a) the reasons for not supplying cauvery drinking water so far by the City Municipal Council for the residents who are residing in K.H.B (Maharaja Nagar) layout near Chikka Mandya, which belonging to Mandya City Municipal Council ; whether it has come to the notice of the Government ;

(b) the year from which the said layout has been handed over from the Karnataka Housing Board to Mandya City Municipal Council ; the amount that has been provided for the development of this layout; the particulars of developmental works that have been taken up in this amount by the City Municipal Council ;

(c) the particulars of works that have been completed so far in this layout with regard to supplying drinking water; the amount that has been borne for the same ; (workwise complete details be furnished)

(d) out of the total sites in this layout, the number of sites in which the houses have been constructed; the population of the same ;

(e) whether it has come to the notice of the Government that the water which is being used by the people of the said layout is contaminated and it is not suitable for drinking ; whether the quality of the water which is utilized by the people has been examined ;

(f) the alternative measures taken for supplying the drinking water to the said layout; the timelimit within which the step would be taken by the Government to provide the drinking water ; (complete details be furnished)

(g) whether there are any proposals in the Government level for verification with regard to supplying Cauvery water by installing new pipe line ? (if so, the details in this regard be furnished)

**DECISION TO LOCKOUT THE GOVERNMENT ENTERPRISES**

**Sri C.T. Ravi (Elected by Legislative Assembly)**

137 (1232 ) Will the Minister for Large and Medium Scale Industries and Infrastucture Development be pleased to state :-

(a) the total number of enterprises which are under Government undertaking in the State; the total number of officers/employees in these enterprises ; (the enterprisewise details of regularized and contract basis employees be furnished)

(b) out of which, the particulars of enterprises which are in profit, loss and defunct ; whether evaluation of the same has been taken place ; the enterprisewise details of profit and loss and the evaluation report be furnished ;

(c) the steps taken by the Government for bringing to the track of the profit of the enterprises which are defunct and those are in loss during the last 3 years ; whether the grant has been provided by the Government for these enterprises ;

(d) the financial conditions of defunct enterprises (details be furnished) ; whether the Government has decided to lockout the enterprises which are defunct and those are in loss; whether the study has been conducted with regard to pros and cons of the same; the step to

be taken by the Government with regard to staffs who are working there ; (details be furnished)

(e) the stand of the Government with regard to merging the defunct enterprises with the enterprise which are in profit instead of closing the same ?

**ELECTION EVASIONS IN V.S.S.N**

**Sri S. Ravi (Local Authorities Constituency)**

138 (1166 ) Will the Minister for Co-operation be pleased to state :-

(a) in the Annual General Body Meeting of Primary Agriculture Credit Co-operative Societies (V.S.S.N), eventhough some innocent farmers/shareholders/ members are attended the same, organizers have not obtained the signature in the annual general body meeting register or obtaining the signature in another register intentionally, whether it has come to the notice of the Government that the eligible voters are being dropped from the list for the election of management board by giving the reasons like they have not attended in annual general body meeting ; if so, the measures taken by the Government to prevent the same ; (information be furnished)

(b) the stand of the Government with regard to distribution of Statewide uniform attendance registers including prescribed serial numbers printed by the Government for all co-operative societies by the Registrar of the co-operative societies to prevent such election evasions in the societies ; (information be furnished)

(c) the stand of the Government with regard to provide the information of meeting notice/meeting invitation letter/meeting attendance and proceedings of meeting of annual general body meeting of Primary Agriculture Credit Co-Operative Societies (V.S.S.N) for public/members and video recording of all such meetings and upload the same and to preserve the same till the upcoming election has been completed on par with Panchatantra 2.0 which is being complied with the Rural Development and Panchayat Raj Department ? (information be furnished)

**PROGRAMMES ORGANISED BY K.S.M.C.A**

**Sri S.L. Bhojegowda (Teachers' Constituency)**

139 (1168 ) Will the Minister for Large and Medium Scale Industries and Infrastructure Development be pleased to state :-

(a) the number of various Government Departments, Corporations, Boards or any other Government Subsidiary Bodies programmes which have been organized by the Karnataka State Marketing Communication and Advertising Limited (K.S.M.C.A) during the last 3 years; the amount that has been borne for these programmes ; (programmewise information be furnished)

(b) whether these programmes have been taken up by the K.S.M.C.A itself or whether the same has been implemented by providing through the piece work contract or tender for any other agencies/ contractors; whether the same has been provided to other agencies/contractors ; (if so, the programmewise information alongwith their details be furnished)

(c) whether the agencies/contractors who have obtaining the programmes by the K.S.M.C.A should have been registered in K.S.M.C.A ; if so, the particulars of agencies/contractors who have been registered in K.S.M.C.A till date ; (details be furnished)

(d) while K.S.M.C.A has obtained the responsibility to chalkedout the organization and implementation of the programmes from the various Government Departments, Corporations, Boards or any other Government Subsidiary Bodies and the details of the standard operating procedures in the planning and implementation of the same ? (the information of MOA, AOA which have been adopted by K.S.M.C.A be furnished)

**DISBURSEMENT OF ZERO INTEREST CROP LOAN**

**Sri Prathap Simha Nayak K (Elected by Legislative Assembly)**

140 (1214 ) Will the Minister for Co-operation be pleased to state :-

(a) whether the disbursement of zero interest crop loan limit has been enhanced from 3 lakh to 5 lakh during the presentation of the previous budget ; out of the said amount that has been enhanced to 5 lakh, the amount that has been disbursed till date ; (districtwise details be furnished)

(b) it has been found that the loan amount that has been enhanced to 5 lakh has not been disbursed completely by the concerned Primary Agriculture Credit Co-operative Societies, the reasons for the same and the step taken by the Government in this regard ;

(c) the timelimit within which an appropriate step would be taken to make available of the said disbursement of zero interest crop loan including enhanced amount completely for eligible beneficiaries ?

**BOARD OF MANAGEMENT OF THE UNVIERSITY OF HORTICULTURAL SCIENCES**

**Sri Nirani Hanamant Rudrappa (Graduates' Constituency)**

141 (1185) Will the Minister for Mines and Geology and Horticulture be pleased to state :-

(a) the number of members who have been appointed to the board of management of the University of Horticultural Sciences of Bagalkot during the last 2 years ; the prevailing criterias for the appointment ; (copy be furnished)

(b) the number of nomination posts at present; whether these have been filled up ; if not, the reasons for the same; (complete information along with the order copy be furnished)

(c) whether the proposal has been received to appoint the Members of the Legislative Council as per the Section 12(2) of the University of Horticultural Sciences Act, 2009 (Amendment 2021) ; (date be furnished)

(d) the reasons for not nominating till date ; the timelimit within which the same would be carried out ?

**PESTICIDES PROVIDING TO FARMERS BY THE HORTICULTURE DEPARTMENT**

**Sri K.S. Naveen (Local Authorities Constituency)**

142 (1184) Will the Minister for Mines and Geology and Horticulture be pleased to state :-

(a) the works for which the grant is being provided to farmers under various schemes by the Horticulture Department ; (schemewise details be furnished)

(b) the quantum of pesticides that are being provided for farmers every year for the plantation of various crops by the Horticulture Department ; (details be furnished)

(c) if the support price has been fixed for horticulture crop, the prices of each crop be furnished ? (details be furnished)

**INFORMATION OF CITY CORPORATIONS IN THE STATE**

**Sri D.T. Srinivas (D.T.S.) (Teachers' Constituency)**

143 (1240) Will the Minister for Urban Development and Town Planning be pleased to state :-

(a) the number of City Corporations in the State and the particulars thereof ;

(b) the particulars of development works which have been undertaken in these City Corporations and the basic facilities which have been provided during the year 2024-25 ; (information be furnished)

(c) the grant that has been released by the Central Government for the implementation of town plans ;

(d) the amount that has been released by the Central Government during the year 2024-25 ; the particulars of City Corporations of various districts for which this amount has been allotted ;

(e) the grant that has been provided to Davangere City Corportation for the basic facilities during the year 2024-25 ; the grant that has been spent ?

## PROVIDING COMPENSATION TO WEAVERS FAMILIES

**Dr. Umashree (Nominated)**

144 (1197 ) Will the Minister for Textiles, Sugarcane Development and Sugar and Agricultural Marketing be pleased to state :-

(a) whether it has come to the notice of the Government that weavers are being commiting suicides in the State ;

(b) the number of weavers who have committed suicide in the State during the last 5 years ;

(c) whether the compensation is being provided to the family members of weavers who have committed suicide ; if so, the number of families to whom the compensation has been provided; the amount which is being provided ;

(d) whether the pension is being provided to the wife of weaver who committed suicide ; whether free education is being provided to their children ?

## HOUSING LAYOUT OF URAGUDU VILLAGE

**Smt. Balkhees Banu (Elected by Legislative Assembly)**

145 (1156 ) Will the Minister for Urban Development and Town Planning be pleased to state :-

(a) the extent of acre of land that has been acquired by the Bhadravathi Urban Development Authority of Shivamogga district for the formation of housing layout in Uragudu village ; (complete details alongwith survey numbers be furnished)

(b) the amount of compensation that has been fixed for the land owners from the survey number 340 to 357

of Uragudu village and the rate of year for which the said compensation has been fixed; (complete details be furnished)

(c) the number of sites that have been provided in the form of compensation to the said land owners; (complete details be furnished)

(d) the date of final notification of the process of land acquisition of the said housing layout ; the date on which the work of layout has been commenced ;

(e) whether it is cause the evasion for the land owners due to the compensation has been disbursed in old price without fixing the price of land compensation at the price of the land during commencement of work ; whether the steps would be taken by the Government to provide the justice for the said land owners ? (details be furnished)

## UPGRADATION INTO CITY MUNICIPAL COUNCIL AND TOWN MUNICIPAL COUNCIL

**Sri Bhimrao Basavaraj Patil (Local Authorities Constituency)**

146 (1152 ) Will the Minister for Municipalities and Haj be pleased to state :-

(a) whether it has come to the notice of the Government that there is a proposal of upgradation of Humnabad Town Municipal Council into City Municipal Council and Rajeshwara Gram Panchayat into Town Municipal Council of Bidar district ;

(b) if so, the reason for not upgraded the same by the Government till date ; (information be furnished)

(c) the date on which the step would be taken by the Government to upgrade the same into City Municipal

Council and Town Municipal Council ? (information be furnished)

## RECOMMENCEMENT OF TOY TRAIN IN RAJA'S SEAT OF MADIKERI

**Sri Kushalappa M.P. (suja) (Local Authorities Constituency)**

147 (1262) Will the Minister for Mines and Geology and Horticulture be pleased to state :-

(a) the reasons for stopped the toy train during the year 2018-19, which was functioning for 15 years near Raja's Seat of Madikeri in Kodgu district ;

(b) the required grant to taken up the repair work of the said toy train ;

(c) whether the technical work has been taken up to examine by the department experts to recommence the same; the present stage of the same; and the timelimit within which it would be recommenced ?

## EXTENT OF LAND UNDER THE JURISDICTION OF BGML AND BEML

**Sri M.L. Anil Kumar (Local Authorities Constituency)**

148 (1177 ) Will the Minister for Large and Medium Scale Industries and Infrastructure Development be pleased to state :-

(a) the extent of land under the jurisdiction of BGML and BEML in Bangarpet and KGF taluks of Kolar district ; (survey numberwise, villagewise and extentwise complete information be furnished)

(b) out of the BGML and BEML land, the extent of land that has been revested to the Government ; the

particulars of purposes for which the revested land has been utilised ; the remaining land thereof ; (surveynumberwise, villagewise and extentwise complete information be furnished)

(c) out of which, the extent of land that has been provided for K.I.A.D.B area; the particulars of various industries/companies for which the land of K.I.A.D.B area has been provided ; the amount that has been fixed per acre ; (complete information be furnished)

(d) the number of industrial areas that have been declared as industrial areas by the K.I.A.D.B in the limits of Kolar district; out of the lands declared as K.I.A.D.B area, the particulars of industries/companies for which the same has been provided; the amount that has been fixed per acre ; (talukwise, extentwise complete information be furnished)

(e) out of the land that has been declared as K.I.A.D.B area, the extent of remaining land which have not been provided for various purpose ? (complete information be furnished)

**COMPREHENSIVE HORTICULTURAL SCHEME**

**Sri Keshava Prasad S. (Elected by Legislative Assembly)**

149 (1245) Will the Minister for Mines and Geology and Horticulture be pleased to state :-

(a) the particulars of grant (subsidy) and facilities which are being provided for the farmers at present under Comprehensive Horticulture Scheme; the quantum of the minimum and maximum grant under this scheme ; and the particular of crops for which it will be applicable ; (cropwise complete information be furnished)

(b) the clarification of the Government for the rumour that the grant of this scheme has been reduced; the particulars of major obstacles which are being faced in the implementation of the existing schemes ; (complete information be furnished)

(c) the step taken by the Government with regard to the delay is being caused to provide the grant for farmers eventhough the grant has been released ; the particulars of manifesto which have been chalkedout by the Government in the district level to get the information properly for beneficiaries with regard to the schemes; (information be furnished)

(d) the number of farmers in the State who have been benefited under this Scheme ; whether it has come to the notice of the Government that there is an allegation of political or aggressiveness in the selection process of applicants ; if so, the step taken by the Government ? (complete information be furnished)

**REGARDING A.P.M.C REGULATED MANDIS**

**Sri Nagaraju M. (Elected by Legislative Assembly)**

150 (1251) Will the Minister for Textiles, Sugarcane Development and Sugar and Agricultural Marketing be pleased to state :-

(a) the total number of A.P.M.C regulated mandis in the State ; (districtwise information be furnished)

(b) the stand of the Government with regard to necessity for the establishment of more number of markets to prevent the difficulties of marketing and to ensuring the income security for farmers; the steps taken by the Government in this regard ;

(c) whether the Government has noticed that the traffic congestion is being increasing day by day in Yeshwanthapura A.P.M.C which is located in the capital city of the State; if so, the step that has been taken in this regard ; and the steps taken to earmark the grant to extend this A.P.M.C premises in the budget of 2025-2026 ;

(d) the steps that have been taken/is being taken by the Government to establish these mandis ?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, PWS-901-Bengaluru, P2